C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಸಂಖ್ಯೆ: 32/2025**

ಪ್ರಾಸಾ. 01 ಚಾಸಾ. 01

| | |
|---|---|
| ಸಾಕ್ಷಿದಾರರ ಹೆಸರು | ಯಶವಂತ |
| ತಂದೆಯ ಹೆಸರು | ನಾಗರಾಜು |
| ವಯಸ್ಸು | 26 ವರ್ಷಗಳು |
| ಉದ್ಯೋಗ | ಆಟೋ ಚಾಲಕ |
| ವಾಸ | ಬೆಂಗಳೂರು |

**ಸಾಕ್ಷಿಯನ್ನು ದಿನಾಂಕ: 30.06.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು, 1 ಮತ್ತು 2ನೇ ಆರೋಪಿತರು ನನ್ನ ತಾತ-ಅಜ್ಜಿ. 5ನೇ ಆರೋಪಿ ನನ್ನ ಚಿಕ್ಕಮ್ಮ, 4ನೇ ಆರೋಪಿ ನನ್ನ ತಾತ. ಚಾಸಾ-2 ನನ್ನ ಮಾವ. ಚಾಸಾ-3 ರಿಂದ 6 ಗೊತ್ತು, ಚಾಸಾ-3 ಮತ್ತು ಚಾಸಾ-4 ನನ್ನ ಸಂಬಂಧಿಕರು. ಚಾಸಾ-5 ಮತ್ತು 6 ನಮ್ಮ ಊರಿನವರು.

2. ದಿನಾಂಕ:01.01.2019 ರಂದು ನಾನು ಮತ್ತು ನನ್ನ ತಾತನಾದ ಚಿಕ್ಕವರದೇಗೌಡ ಎತ್ತಿನ ಗಾಡಿಯಲ್ಲಿ ಕಣದಿಂದ ಮನೆ ಕಡೆ ಬರುತ್ತಿದ್ದಾಗ 1ನೇ ಆರೋಪಿಯ ಮನೆಯ ಪಕ್ಕದಲ್ಲಿ ಹತ್ತು ಅಡಿ ಜಾಗ ಓಡಾಡಲು ಬಿಟ್ಟಿರುತ್ತಾರೆ. ನಾವು ಸದರಿ ಜಾಗದ ಮುಖಾಂತರ ಹೋಗಬೇಕಾದರೆ ಎಲ್ಲಾ ಆರೋಪಿತರೂ ಸೇರಿ ನಮ್ಮನ್ನು ಆ ಜಾಗದಲ್ಲಿ ಓಡಾಡಬೇಡಿ ಎಂದು ತಡೆ ಹಿಡಿದರು. ಆಗ ಬೆಳಿಗ್ಗೆ 8.00 ರಿಂದ 8.30 ಗಂಟೆ ಆಗಿತ್ತು. ನಮ್ಮ ಎತ್ತಿನಗಾಡಿಯನ್ನು ತಡೆದು ಹಿಂದೆ ಹಾಗೂ ಮುಂದೆ ಹೋಗಲು ಬಿಡಲಿಲ್ಲ. ಆಗ 1ನೇ ಆರೋಪಿ ನನ್ನ ಬಲಗೈ ನ ಹೆಬ್ಬೆಟ್ಟಿನ ಕೆಳಭಾಗಕ್ಕೆ ಕೊಡಲಿಯಿಂದ ಹೊಡೆದರು. ಆಗ ನನ್ನ

ಕೈಯಲ್ಲಿ ಗಾಯವಾಗಿ ರಕ್ತ ಬರುತ್ತಿತ್ತು. ಅಲ್ಲಿ ಇದ್ದ ಅಕ್ಕಪಕ್ಕದವರು ನನ್ನನ್ನು ಹಿಡಿದುಕೊಂಡರು. 2ನೇ ಆರೋಪಿ 1ನೇ ಆರೋಪಿಯ ಕೈಯಲ್ಲಿದ್ದ ಕೊಡಲಿಯನ್ನು ಕಿತ್ತುಕೊಂಡರು. ಆಗ 1ನೇ ಆರೋಪಿ ಅಲೋ ಬ್ಲಾಕ್ ಇಟ್ಟಿಗೆ ತೆಗೆದುಕೊಂಡು ನನ್ನ ಮೇಲೆ ಎತ್ತಿಹಾಕಲು ಬಂದರು. ನಾನು ತಡೆಯಲು ಹೋದಾಗ ಸದರಿ ಆಲೋ ಬ್ಲಾಕ್ ಇಟ್ಟಿಗೆ ಅವರ ಮೇಲೆ ಬಿತ್ತು. ಆಗ ನನ್ನ ಅಜ್ಜಿ ಮತ್ತು ನನ್ನ ಅಮ್ಮ ಬಂದಾಗ ಉಳಿದ ಆರೋಪಿತರು ಅವರ ಮೇಲೂ ಅವಾಚ್ಯ ಶಬ್ದಗಳಿಂದ ಬೈದರು. ಮತ್ತು ಆರೋಪಿತರು ನನ್ನ ಅಜ್ಜಿ(ದೊಡ್ಡತಾಯಮ್ಮ) ಮತ್ತು ನನ್ನ ಮಾವ(ಕುಮಾರ್) ನಿಗೂ ಸಹ ಕೈಗಳಿಂದ ಹಲ್ಲೆ ಮಾಡಿದರು. ನಂತರ ನನಗೆ ಜೀವ ಬೆದರಿಕೆ ಹಾಕಿದರು. ನಂತರ ನನ್ನನ್ನು ನನ್ನ ಚಿಕ್ಕಪ್ಪ ದೇವರಾಜು ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಘಟನೆಯ ಬಗ್ಗೆ ದೂರು ಕೊಡುತ್ತೇನೆಂದು ಹೇಳಿದಾಗ ಗ್ರಾಮಸ್ಥರು ನ್ಯಾಯ ಪಂಚಾಯಿತಿ ಮಾಡುತ್ತೇವೆಂದು ಹೇಳಿದರು. ಆಗ ಆರೋಪಿತರು ರಾಜಿ ಆಗುತ್ತೇವೆಂದು ಒಪ್ಪಿಕೊಂಡರು. ನಂತರ ನಮ್ಮ ಮೇಲೆ ದೂರು ನೀಡಿದರು. ನಂತರ ನಾನು 4ನೇ ತಾರೀಖಿನಂದು ಹೋಗಿ ದೂರು ನೀಡಿರುತ್ತೇನೆ. ಸದರಿ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ನನ್ನ ಕೈ ಪೆಟ್ಟಾಗಿದ್ದರಿಂದ ದೂರಿನಲ್ಲಿ ನಾನು ಸಹಿ ಹಾಕಿರುವುದಿಲ್ಲ. ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ.

3. ನಾನು ದೂರು ಕೊಟ್ಟ ನಂತರ ಪೊಲೀಸರು ಗಲಾಟೆಯಾಗಿದ್ದ ಸ್ಥಳಕ್ಕೆ ಬಂದರು. ಸದರಿ ಸ್ಥಳವನ್ನು ಊರಿನವರು ತೋರಿಸಿದರು ಮತ್ತು ಪೊಲೀಸರು ಸಂಜೆ 4.45 ಗಂಟೆಗೆ ಬಂದು ಮಹಜರ್ ಮಾಡಿಕೊಂಡು ಹೋದರು. ಮಹಜರ್ ಮಾಡುವ ಕಾಲದಲ್ಲಿ ನಾನು, ಚೌಡೇಗೌಡ, ಚಿಕ್ಕಮರೀಗೌಡ ಇದ್ದರು. ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಮಹಜರನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

4. ನನ್ನ ಮೇಲೆ ಹಲ್ಲೆ ಮಾಡಲು ತಂದಿದ್ದ ಕೊಡಲಿ ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಒಂದು ಕೊಡಲಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಕೊಡಲಿಯನ್ನು ಮು.ಮ.1 ಎಂದು ಗುರುತಿಸಲಾಯಿತು. ಸದರಿ ಕೊಡಲಿ ಹಲ್ಲೆಯಾದ ನಂತರ ಆರೋಪಿಯ ಮನೆಯ ಬಳಿ ಬಿದ್ದಿತ್ತು, ಅದನ್ನು ನಾನೇ ತೆಗೆದು ಇಟ್ಟಿದ್ದೆ. ಆರೋಪಿತರು ನಮ್ಮ ಮೇಲೆ ದೂರ ನೀಡಿದ್ದರಿಂದ ನಾನು ಪೊಲೀಸ್

ಠಾಣೆಗೆ ಹೋಗಿ ಕೊಟ್ಟಿದ್ದೆ. ಸದರಿ ಕೊಡಲಿಯನ್ನು ದಿನಾಂಕ:20.03.2019 ರಂದು ನೀಡಿದ್ದೆ. ಆ ದಿನ ನಾನು ಪೊಲೀಸರಿಗೆ ಕೊಡಲಿ ಮತ್ತು ನನಗೆ ಸಂಬಂಧಿಸಿದ ಒಂದು ಲುಂಗಿಯನ್ನು ಹಾಜರುಪಡಿಸಿದ್ದೆ. ಸದರಿ ಲುಂಗಿಯ ಮೇಲೆ ರಕ್ತದ ಕಲೆಯಾಗಿದ್ದರಿಂದ ಅದನ್ನು ಹಾಜರುಪಡಿಸಿದ್ದೆ. ಈಗ ಒಂದು ಲುಂಗಿಯನ್ನು ನೋಡುತ್ತಿದ್ದು, ಸದರಿ ಲುಂಗಿಯನ್ನು ಮು.ಮ.2 ಎಂದು ಗುರುತಿಸಲಾಯಿತು. ಸದರಿ ಮು.ಮ.1 ಮತ್ತು 2 ನ್ನು ಪೊಲೀಸರು ಮಹಜರ್ ಮಾಡಿ ಅಮಾನತುಪಡಿಸಿಕೊಂಡರು. ಸದರಿ ಮಹಜರನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸದರಿ ಮಹರಿಗೆ ಸತ್ಯ ಹಾಗೂ ಚೌಡೇಗೌಡ ರವರು ಸಹಿ ಮಾಡಿರುತ್ತಾರೆ.

ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಾರ್ಯ ಕಾಲಪದ ಅವಧಿ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.